# ಎನ್‌ಐಟಿಕೆ: ವಿಶ್ಲೇಷಣಾತ್ಮಕ ಕಾರ್ಯಾಗಾರ

**ಸುರತ್ಕಲ್, ಅ. 17:** ಎನ್‌ಐಟಿಕೆ ಮತ್ತು ದಿ ಇನ್‌ಸ್ಟಿಟ್ಯೂಶನ್ ಆಫ್ ಎಂಜಿನಿಯರ್ಸ್ ಭಾರತ, ಮಂಗಳೂರು ಲೋಕಲ್ ಸೆಂಟರ್ ಜಂಟಿಯಾಗಿ ಭೂಕುಸಿತಗಳು - ಅದರ ಕಾರಣಗಳು, ಪರಿಣಾಮಗಳು, ಭವಿಷ್ಯ, ತಡೆಗಟ್ಟುವಿಕೆ, ರಕ್ಷಣೆ ಕುರಿತು ಸಮಸ್ಯೆಯ ಸ್ಲಿಪ್‌ಗಳು- ವಿಶ್ಲೇಷಣಾತ್ಮಕ ಸಲಹೆಗಳು ಕುರಿತ ಕಾರ್ಯಾಗಾರ ಜರಗಿತು.



ನಿವೃತ್ತ ಪ್ರೊ. ಆರ್.ಕೆ. ಯಾಜಿ, ಪ್ರೊ। ಆರ್. ಶಿವಶಂಕರ್, ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ಅನನ್ಯಾ ವಾಸುದೇವ್ ಅವರು ಕಾರ್ಯಾಗಾರದಲ್ಲಿ ದಿಕ್ಸೂಚಿ ಭಾಷಣಗೈದರು.

ದತ್ತಾಂಶ ಸ್ವಾಧೀನ, ವಿಶ್ಲೇಷಣೆ, ವಿನ್ಯಾಸ, ಭೂಪ್ರದೇಶಗಳ ವಿವರ ಮತ್ತು ಮೇಲ್ವಿಚಾರಣೆಯ ಅತ್ಯಾಧುನಿಕ ತಂತ್ರಗಳೊಂದಿಗೆ ಎಂಜಿನಿಯರಿಂಗ್ ಕ್ಷೇತ್ರವು ಅನುಸರಿಸುವ ಕುರಿತು ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ಎನ್‌ಐಟಿಕೆಯ ಯೋಜನೆ ಮತ್ತು ಅಭಿವೃದ್ಧಿ ವಿಭಾಗದ ಡಾ। ಕೆ.ಎಸ್. ಬಾಬು ನಾರಾಯಣ ತಂಡದ ನೇತೃತ್ವದಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿತ್ತು. ಅಧ್ಯಾಪಕರು, ಆಡಳಿತಾಧಿಕಾರಿಗಳು, ಪಾಲುದಾರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Udayavani, Date: 18/10/22. p, no - 04